ಮಂಗಳೂರು ಶನಿವಾರ 3 ನವೆಂಬರ್ 2018 ಸಂಪುಟ 40, ಸಂಚಿಕೆ 228, ಪುಟಗಳು 12+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ REG.No.MNG / 121 / 2018-20 Posted at kodialbail P.O / RNI:29813/78/ Daily ಬೆಲೆ ₹5.00

# ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ



ಪೌರತ್ವ ನೀಡುವುದು ಹುಚ್ಚುನೀತಿ ಎಂದ ಟ್ರಂಪ್ ೧೦

2030ರ ವೇಳೆಗೆ ನಗರಕ್ಕೆ 2 ವಿಮಾನ ನಿಲ್ದಾಣ ೬

೫ ಇಡೀ ದೇಶ ಒಂದು ಕುಟು ಇದ್ದಂತೆ: ರಾಜ್ಯಪಾಲ ವಾ

## ಎಂಆರ್‌ಪಿಎಲ್–ಸಹ್ಯಾದ್ರಿ ಅಂತರ್‌ಕಾಲೇಜು ಮಟ್ಟದ ಚರ್ಚಾ ಸ್ಪರ್ಧೆ

# ಕಠಿಣ ನಿಲುವಿನಿಂದ ಭ್ರಷ್ಟಾಚಾರ ಮುಕ್ತ

•ದಿಗಂತ ವರದಿ, ಮಂಗಳೂರು

ದೇಶದ ಪ್ರತಿ ನಾಗರಿಕನೂ ತಾನು ಯಾವುದೇ ಕ್ಷೇತ್ರದಲ್ಲಿ ಭ್ರಷ್ಟಾಚಾರ ನಡೆಸುವುದಿಲ್ಲ ಎಂಬ ದೃಢ ಸಂಕಲ್ಪ ಹೊಂದಬೇಕು. ಪ್ರತಿ ವ್ಯಕ್ತಿ ಭ್ರಷ್ಟಾಚಾರದ ಬಗ್ಗೆ ಕಠಿಣ ನಿಲುವು ತಳೆದರೆ ನಮ್ಮ ದೇಶ ಭ್ರಷ್ಟಾಚಾರ ಮುಕ್ತವಾಗಲು ಸಾಧ್ಯ ಎಂದು ಎಂಆರ್‌ಪಿಎಲ್ ಮ್ಯಾನೇಜಿಂಗ್ ಡೈರೆಕ್ಟರ್ ಎಂ. ವೆಂಕಟೇಶ್ ಹೇಳಿದರು.

ಎಂಆರ್‌ಪಿಎಲ್ ವತಿಯಿಂದ ಅಡ್ಯಾರ್‌ನ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಸಹಯೋಗದೊಂದಿಗೆ ಸಹ್ಯಾದ್ರಿ ಕಾಲೇಜಿನಲ್ಲಿ ಶುಕ್ರವಾರ 'ಭ್ರಷ್ಟಾಚಾರ ನಿರ್ಮೂಲನೆ ಮಾಡಿ ಹೊಸ ಭಾರತವನ್ನು ಕಟ್ಟೋಣ' ಎಂಬ ವಿಷಯದ ಬಗ್ಗೆ ನಡೆದ 'ಎಂಆರ್‌ಪಿಎಲ್ -ಸಹ್ಯಾದ್ರಿ ಅಂತರ್ ಕಾಲೇಜು ಮಟ್ಟದ ಚರ್ಚಾ ಸ್ಪರ್ಧೆ 2018' ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ನಾಗರಿಕರು ತಮ್ಮ ಕರ್ತವ್ಯದ ಸ್ಥಳದಲ್ಲಿ ಯಾವುದೇ ರೀತಿಯ ಪ್ರಲೋಭನೆಗೆ ಒಳಗಾಗದೇ ಕೆಲಸ ನಿರ್ವಹಿಸಬೇಕು. ನಮಗೆ ವಹಿಸಿದ ಕೆಲಸವನ್ನು ಸರಿಯಾಗಿ ನಿರ್ವಹಿಸಿದ್ದೇವೆಯೇ ಎಂಬ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಯಾವುದೇ ರೀತಿಯ ಭ್ರಷ್ಟಾಚಾರಕ್ಕೆ ಆಸ್ಪದ ನೀಡ ಬಾರದು. ಕೆಲ ಸಂದರ್ಭದಲ್ಲಿ ಎಲ್ಲರೂ ತಪ್ಪು ಮಾಡುತ್ತಾರೆ. ಆದರೆ, ನಡೆದ ತಪ್ಪಿನಿಂದ ಪಾಠ ಕಲಿತು ಮುಂದೆ ಅಂತಹಾ ತಪ್ಪುಗಳಾಗದಂತೆ ಎಚ್ಚರ ವಹಿಸಬೇಕು ಎಂದರು.

ಎಂಆರ್‌ಪಿಎಲ್ ಮುಖ್ಯ ವಿಜಿಲೆನ್ಸ್ ಅಧಿಕಾರಿ ರಾಜೀವ್ ಕುಶ್ವಾ ಮಾತನಾಡಿ, ದೇಶದಲ್ಲಿ ಭ್ರಷ್ಟಾಚಾರ ತಡೆಗಟ್ಟುವ ವಿಷಯದಲ್ಲಿ ಯುವಜನತೆ ಗಂಭೀರ ಆಲೋಚನೆ ನಡೆಸಬೇಕು. ಕೇವಲ ಲಂಚ ನೀಡುವುದು, ಸ್ವೀಕರಿಸುವುದು ಮಾತ್ರ ಭ್ರಷ್ಟಾಚಾರವಲ್ಲ. ಯಾವುದೇ ಕಾರ್ಯಸಾಧನೆಗೆ ಪ್ರಭಾವ ಬೀರುವುದು, ಉಡುಗೊರೆ ಪಡೆದುಕೊಳ್ಳುವುದು, ಆಸ್ಪತ್ರೆಯಲ್ಲಿ ಹೆಚ್ಚಿನ ಬಿಲ್ ನೀಡಿದ್ದರೂ, ಅದನ್ನು ಪಾವತಿಸಿ ಸುಮ್ಮನಿರುವುದು, ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅಧ್ಯಯನ ನಡೆಸದೇ ಅಂಕ ಗಳಿಸದಿರುವುದೂ ಭ್ರಷ್ಟಾಚಾರ ಎನಿಸಿಕೊಳ್ಳುತ್ತದೆ. ಖಾಸಗಿ ಸಂಸ್ಥೆಗಳಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಈ ಬಗ್ಗೆ ಜಾಗೃತಿ, ಅರಿವು ಮೂಡಿಸುವ ಕಾರ್ಯವನ್ನು ವಿಜಿಲೆನ್ಸ್ ಆಯೋಗ ನಡೆಸುತ್ತಿದೆ ಎಂದರು.

ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಪ್ರಾಂಶುಪಾಲ ಡಾ. ಶ್ರೀನಿವಾಸ ರಾವ್ ಕುನ್ತೆ ಅಧ್ಯಕ್ಷತೆ ವಹಿಸಿದ್ದರು.

ಡಾ. ಮೋಲಿ ಚೌಧರಿ ಸ್ವಾಗತಿಸಿದರು. ಎಂಆರ್‌ಪಿಎಲ್ ವಿಜಿಲೆನ್ಸ್ ಚೀಫ್ ಮ್ಯಾನೇಜರ್ ಎಚ್.ವಿ. ಮಂಜುನಾಥ ವಂದಿಸಿದರು. ಕ್ಯಾಲಿಡಾ ರಾಯ್ಸ್ ಡಿಸೋಜ ಕಾರ್ಯಕ್ರಮ ನಿರೂಪಿಸಿದರು.

ಸಹ್ಯಾದ್ರಿ ಕಾಲೇಜಿನಲ್ಲಿ ಸತ್ಯ, ನಿಷ್ಠೆ ಪ್ರತಿಜ್ಞೆಯ ಫಲಕವನ್ನು ಈ ಸಂದರ್ಭ ಎಂ. ವೆಂಕಟೇಶ್ ಉದ್ಘಾಟಿಸಿದರು.



### ಎನ್‌ಐಟಿಕೆ ಪ್ರಥಮ

ಚರ್ಚಾ ಸ್ಪರ್ಧೆಯಲ್ಲಿ ಸುರತ್ಕಲ್ ಎನ್‌ಐಟಿಕೆ ಪ್ರಥಮ, ಯೆನೆಪೊಯ ಮೆಡಿಕಲ್ ಕಾಲೇಜು ದ್ವಿತೀಯ, ವಾಮಂಜೂರಿನ ಸಂತ ಜೋಸೆಫ್ ಇಂಜಿನಿಯರಿಂಗ್ ಕಾಲೇಜು ತೃತೀಯ ಬಹುಮಾನ ಪಡೆದುಕೊಂಡಿತು.

### ಭ್ರಷ್ಟಾಚಾರ ತಡೆದ ಪ್ರಧಾನಿ ಮೋದಿ

ದೇಶದಲ್ಲಿ ನಾಲ್ಕು ವರ್ಷದ ಹಿಂದೆ ರೈತರಿಗೆ ಯೂರಿಯಾ ಕೊರತೆ ಉಂಟಾಗಿತ್ತು. ರೈತರಿಗೆಂದು ಉತ್ಪಾದಿಸಿದ ಯೂರಿಯಾವನ್ನು ಕೈಗಾರಿಕೆಗಳು ಪಡೆದುಕೊಂಡು ಯೂರಿಯಾದ ಕೃತಕ ಕೊರತೆ ಉಂಟುಮಾಡುತ್ತಿದ್ದವು. ಈ ವಿಷಯದಲ್ಲಿ ಭ್ರಷ್ಟಾಚಾರ ನಡೆಯುತ್ತಿತ್ತು. ಇದಕ್ಕೆ ಉಪಾಯ ಹುಡುಕಿದ ಪ್ರಧಾನಿ ನರೇಂದ್ರ ಮೋದಿ ಯೂರಿಯಾಕ್ಕೆ ಬೇವು ಲೇಪನದ ನಿರ್ಧಾರ ಕೈಗೊಂಡರು. ಬೇವು ಲೇಪಿತ ಯೂರಿಯಾ ಕೈಗಾರಿಕೆಗಳಿಗೆ ಉಪಯೋಗವಿಲ್ಲ. ಇದರಿಂದಾಗಿ ರೈತರಿಗೆ ಯೂರಿಯಾ ದೊರೆಯಿತು. ಈ ಮೂಲಕ ಪ್ರಧಾನಿ ಮೋದಿ ಭ್ರಷ್ಟಾಚಾರ ತಡೆಗಟ್ಟಿದರು. ಭ್ರಷ್ಟಾಚಾರ ತಡೆಗೆ ಇಂತಹಾ ಆಲೋಚನೆಗಳು ಕಾರ್ಯಗತಗೊಳ್ಳಬೇಕಿದೆ ಎಂದು ಎಂಆರ್‌ಪಿಎಲ್ ಮುಖ್ಯ ವಿಜಿಲೆನ್ಸ್ ಅಧಿಕಾರಿ ರಾಜೀವ್ ಕುಶ್ವಾ ಹೇಳಿದರು.

ಶನಿವಾರ, ನವೆಂಬರ್ 3, 2018 | ₹ 5.00 • www.prajavani.net /prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ನಗುವಿನ ಹಾರೈಕೆ**
ಬೆಂಗಳೂರಿನಲ್ಲಿ ಭಾನುವಾರ ನಡೆಯಲಿರುವ ಟಿಸಿಎಸ್ ವಿಶ್ವ 10ಕೆ ಓಟಕ್ಕೆ ಚಾಲನೆ ನೀಡಲು ಬಂದಿರುವ ಪ್ರಚಾರ ರಾಯಭಾರಿ, ಬೀಜಿಂಗ್ ಒಲಿಂಪಿಕ್ಸ್ ಪದಕ ವಿಜೇತೆ ಆಸ್ಟ್ರೇಲಿಯಾದ ಸ್ಟೇಫನಿ ರೈಸ್

**ಸಹ್ಯಾದಿ ಕಾಲೇಜಿನಲ್ಲಿ ಸಿವಿಸಿ ಆನ್‌ಲೈನ್ ಕೇಂದ್ರ ಉದ್ಘಾಟನೆ**

# ಭ್ರಷ್ಟಾಚಾರ ಜಾಗೃತಿ ಇಂದಿನ ಅಗತ್ಯ: ವೆಂಕಟೇಶ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಭ್ರಷ್ಟಾಚಾರ ಅಳಿಸಿ-ನವ ಭಾರತ ನಿರ್ಮಿಸಿ' ಜಾಗೃತಿ ಅರಿವು ಸಪ್ತಾಹದ ಅಂಗವಾಗಿ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಭ್ರಷ್ಟಾಚಾರದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ಎಂಆರ್‌ಪಿಎಲ್ ಆಶ್ರಯದಲ್ಲಿ ಕೇಂದ್ರ ಜಾಗೃತ (ವಿಜಿಲೆನ್ಸ್) ಆಯೋಗದ (ಸಿವಿಸಿ) ಆನ್‌ಲೈನ್ ನೋಂದಣಿ ಕೇಂದ್ರವನ್ನು ಶುಕ್ರವಾರ ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ವೆಂಕಟೇಶ ಹಾಗೂ ಮುಖ್ಯ ಜಾಗೃತ (ವಿಜಿಲೆನ್ಸ್) ಅಧಿಕಾರಿ ರಾಜೀವ್ ಕುಶ್ವಾ ಉದ್ಘಾಟಿಸಿದರು.

ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ವೆಂಕಟೇಶ್, 'ನಮ್ಮ ಸಂಸ್ಕೃತಿ, ಆಚಾರಗಳನ್ನು ಮೊದಲು ಮನೆಯಲ್ಲಿಯೇ ಕಲಿಯುತ್ತೇವೆ. ದೇಶದಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಕಾರ್ಯವೂ ಮನೆಯಿಂದ ಆರಂಭ ಆಗಬೇಕು. ಪ್ರತಿಯೊಬ್ಬರೂ ಭ್ರಷ್ಟಾಚಾರ ಮುಕ್ತ ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವುದಕ್ಕೆ ಬದ್ಧರಾಗಬೇಕು' ಎಂದು ಹೇಳಿದರು.

'ಭ್ರಷ್ಟಾಚಾರವು ಎಲ್ಲ ವಲಯಗಳನ್ನು ತಲ್ಲಣ ಮಾಡುತ್ತಿರುವ ಸಂದರ್ಭದಲ್ಲಿ ಇಂತಹ ವಿನೂತನ ರೀತಿಯ ಸಪ್ತಾಹ ಹಮ್ಮಿಕೊಂಡಿರುವುದು ಅರ್ಥಪೂರ್ಣ. ಭ್ರಷ್ಟಾಚಾರದ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಉಂಟು ಮಾಡುವ ಸಲುವಾಗಿ ಸಹ್ಯಾದ್ರಿ ಕಾಲೇಜಿನಲ್ಲಿ ಆನ್‌ಲೈನ್ ನೋಂದಣಿ ಹಬ್ ಆರಂಭ ಮಾಡಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಆನ್‌ಲೈನ್ ಮೂಲಕ ತಮ್ಮ ವೈಯಕ್ತಿಕ ವಿವರ ದಾಖಲು ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ನೋಂದಣಿ ಮಾಡಿ ಪ್ರತಿಜ್ಞಾವಿಧಿ ಸ್ವೀಕರಿಸಿದ ನಂತರ ಕೇಂದ್ರ ಜಾಗೃತ ಆಯೋಗದಿಂದ ಪ್ರಮಾಣ ಪತ್ರ ಸಿಗಲಿದೆ' ಎಂದು ಹೇಳಿದರು.



ಚರ್ಚಾ ಸ್ಪರ್ಧೆಯ ವಿಜೇತರ ಜತೆಗೆ ಮುಖ್ಯ ಜಾಗೃತ (ವಿಜಿಲೆನ್ಸ್) ಅಧಿಕಾರಿ ರಾಜೀವ್ ಕುಶ್ವಾ, ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ವೆಂಕಟೇಶ, ಪ್ರಾಚಾರ್ಯ ಡಾ. ಶ್ರೀನಿವಾಸ್ ರಾವ್ ಕುನ್ಚೆ ಇದ್ದಾರೆ. ಪ್ರಜಾವಾಣಿ ಚಿತ್ರ

ಮುಖ್ಯ ಜಾಗೃತ (ವಿಜಿಲೆನ್ಸ್) ಅಧಿಕಾರಿ ರಾಜೀವ್ ಕುಶ್ವಾ ಮಾತನಾಡಿ, 'ಖಾಸಗಿ ಕಂಪನಿ, ಸಂಸ್ಥೆ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲಿಯೆ ಅತೀ ಹೆಚ್ಚು ಭ್ರಷ್ಟಾಚಾರ ನಡೆಯುತ್ತಿದೆ. ಇದನ್ನು ವ್ಯವಸ್ಥಿತವಾಗಿ ತಡೆಯುವ ಕೆಲಸ ಆಗಬೇಕು. ಕಾಲೇಜು ವಿದ್ಯಾರ್ಥಿಗಳು ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಕ್ಕೆ ಮುಂದಾಗಬೇಕು. ಹಣ ತೆಗೆದುಕೊಳ್ಳುವುದು ಮಾತ್ರ ಭ್ರಷ್ಟಾಚಾರ ಎಂದು ತಿಳಿಯಬಾರದು. ಮನೆ, ಶಾಲೆ, ಸಮುದಾಯ ಸೇರಿದಂತೆ ಎಲ್ಲ ಕಡೆಗಳಲ್ಲಿಯೂ ಭ್ರಷ್ಟಾಚಾರ ನಡೆಯುತ್ತದೆ' ಎಂದು ಅವರು ಹೇಳಿದರು.

'ವಿದ್ಯಾರ್ಥಿಗಳಲ್ಲಿ ಭ್ರಷ್ಟಾಚಾರ ಬಗ್ಗೆ ಅರಿವು ಮೂಡಿದರೆ, ಈ ವ್ಯವಸ್ಥೆ ಸುಲಭವಾಗಿ ಸರಿಪಡಿಸಲು ಸಾಧ್ಯ. ಯಾವುದೇ ಕ್ಷೇತ್ರದಲ್ಲಿ ಭ್ರಷ್ಟಾಚಾರ ನಡೆದರೂ ಅದನ್ನು ವಿರೋಧಿಸುವ ಗುಣವು ವಿದ್ಯಾರ್ಥಿಗಳಲ್ಲಿ ಬರಬೇಕು' ಎಂದರು.

ಸಹ್ಯಾದ್ರಿ ಕಾಲೇಜಿನ ಪ್ರಾಚಾರ್ಯ ಡಾ. ಶ್ರೀನಿವಾಸ್ ರಾವ್ ಕುನ್ಚೆ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಭ್ರಷ್ಟಾಚಾರ ಬಗ್ಗೆ ಜನರಲ್ಲಿ ಜಾಗೃತಿ ಉಂಟು ಮಾಡುವ ಸಲುವಾಗಿ ಕೇಂದ್ರ ವಿಜಿಲೆನ್ಸ್ ಆಯೋಗವು ಪ್ರತಿ ವರ್ಷವೂ ಜಾಗೃತಿ ಸಪ್ತಾಹ ಹಮ್ಮಿಕೊಳ್ಳುತ್ತಿದ್ದು, ಯುವಕರಲ್ಲಿ ಶಿಕ್ಷಣ ಮತ್ತು ಜಾಗೃತಿ ನೀಡುವ ಸಲುವಾಗಿ ಕಾಲೇಜು ಮಟ್ಟದ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ವಿಜೇತರಿಗೆ ಬಹುಮಾನ ನೀಡಲಾಗುತ್ತದೆ' ಎಂದು ಹೇಳಿದರು.

**ಮುಖ್ಯಾಂಶಗಳು**

- ಎಂಆರ್‌ಪಿಎಲ್ ಸಹಯೋಗದಲ್ಲಿ ಜಾಗೃತಿ ಸಪ್ತಾಹ
- ಸಹ್ಯಾದ್ರಿ ಕಾಲೇಜಿನ 250ಕ್ಕೂ ಹೆಚ್ಚು ವಿದ್ಯಾರ್ಥಿಗಳ ನೋಂದಣಿ
- ನೋಂದಣಿಗೆ www. cvc. nic.in ಕ್ಲಿಕ್ ಮಾಡಿ

## ವಿಜೇತರು

ಚರ್ಚಾ ಸ್ಪರ್ಧೆಯಲ್ಲಿ ಎನ್ಐಟಿಕೆ ಕಾಲೇಜಿನ ಶುಭಾಂಗ ಭಂಡಾರಕರ್, ಫಾತಿಮಾ ಶಕೀರ್- ಪ್ರಥಮ, ಯೇನೆಪೋಯ ಕಾಲೇಜು- ತಬಿಂದಾ ನಶೀಮ್, ಯೋಗ್ನಾ ಅಕ್ಕಿನೇನಿ ದ್ವಿತೀಯ, ಸೇಂಟ್ ಜೋಸೆಫ್ ಕಾಲೇಜು-ಅಸ್ಲಾನ್ ಕೊಲೊ, ಅಕ್ತಾ ಲೋಬೊ, ತೃತೀಯ, ಬೆಸ್ಟ್ ಡಿಬೇಟರ್ ಸಹ್ಯಾದ್ರಿ ಕಾಲೇಜು- ನಿವ್ಯಾ ಪಾಲಾಯಿತು.

www.varthabharati.in
ಜನದನಿಯ ಸಾರಥಿ
epaper.varthabharati.in

# ವಾರ್ತಾ ಭಾರತಿ

◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
3 ನವೆಂಬರ್ 2018
ಶನಿವಾರ
VARTHABHARATHI KANNADA DAILY

/Varthabharati REGD.NO: MNG/958/2016-18 RNI N0. KAR KAN/2003/11378 ● ಸಂಪುಟ 16 ● ಸಂಚಿಕೆ 64 ● ಮಂಗಳೂರು ● ಪುಟ 1

CENTRAL LIBRARY

## ಎಂಆರ್‌ಪಿಎಲ್-ಸಹ್ಯಾದ್ರಿ ಕಾಲೇಜು ಮಟ್ಟದ ಚರ್ಚಾ ಸ್ಪರ್ಧೆ ಸಮಾರೋಪ

# 'ಭ್ರಷ್ಟಾಚಾರ ಮುಕ್ತ ಭಾರತ ಯುವಕರ ಜವಾಬ್ದಾರಿ'




ಮಂಗಳೂರು, ನ.2: ಯುವಕರು ಜೀವನದಲ್ಲಿ ಯಾವುದೇ ರೀತಿಯ ನಕಾರಾತ್ಮಕ ವಿಷಯಗಳ ಬಗ್ಗೆ ವಿಚಾರಗಳನ್ನು ಮಾಡಬಾರದು. ಭ್ರಷ್ಟಾಚಾರ ಮುಕ್ತ ಭಾರತವನ್ನಾಗಿ ರೂಪಿಸುವ ಜವಾಬ್ದಾರಿ ಯುವಕರದ್ದು ಎಂದು ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ಸ್ ಲಿ. (ಎಂಆರ್‌ಪಿಎಲ್) ವ್ಯವಸ್ಥಾಪಕ ನಿರ್ದೇಶಕ ಎಂ.ವೆಂಕಟೇಶ ತಿಳಿಸಿದ್ದಾರೆ.

ಕೇಂದ್ರ ವಿಜಿನಲ್ಸ್ ಆಯೋಗದ 'ಜಾಗೃತ ಅರಿವು ಸಪ್ತಾಹ' ಪ್ರಯುಕ್ತ ನಗರದ ಸಹ್ಯಾದ್ರಿ ಕ್ಯಾಂಪಸ್‌ನ ಸೆಮಿನಾರ್ ಹಾಲ್‌ನಲ್ಲಿ ಎಂಆರ್‌ಪಿಎಲ್ ಹಾಗೂ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜುಗಳ ಆಶ್ರಯದಲ್ಲಿ ಶುಕ್ರವಾರ ಏರ್ಪಡಿಸಿದ್ದ 'ಭ್ರಷ್ಟಾಚಾರ ನಿರ್ಮೂಲನೆ ಮಾಡಿ ಹೊಸ ಭಾರತವನ್ನು ಕಟ್ಟೋಣ' ಎಂಬ ವಿಷಯದಲ್ಲಿ ಕಾಲೇಜು ಮಟ್ಟದ ಚರ್ಚಾ ಸ್ಪರ್ಧೆ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿಯೊಬ್ಬರು ಭ್ರಷ್ಟಾಚಾರವನ್ನು ವಿರೋಧಿಸಿದರೆ ಮರುಕ್ಷಣವೇ ಭಾರತ ಭ್ರಷ್ಟಾಚಾರ ಮುಕ್ತಗೊಳ್ಳುತ್ತದೆ ಎಂದು ಅವರು ತಿಳಿಸಿದರು.

ಎಂಆರ್‌ಪಿಎಲ್‌ನ ಮುಖ್ಯ ವಿಜಿಲನ್ಸ್ ಅಧಿಕಾರಿ ರಾಜೀವ್ ಕುಶ್ವಾ ಮಾತನಾಡಿ, ಭ್ರಷ್ಟಾಚಾರದ ಬಗ್ಗೆ ದೇಶದ ಜನರನ್ನು ಜಾಗೃತಗೊಳಿಸಲು ಕೇಂದ್ರ ವಿಜಿಲನ್ಸ್ ಆಯೋಗ ಪ್ರತೀ ವರ್ಷವೂ 'ಜಾಗೃತ ಅರಿವು ಸಪ್ತಾಹ'ವನ್ನು ಆಚರಿಸುತ್ತಾ ಬರುತ್ತಿದೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುವಲ್ಲಿ ದೇಶದ ಯುವಕರಿಗೆ ಶಿಕ್ಷಣ ಮತ್ತು ಜಾಗೃತಿ ನೀಡುವ ಸಲುವಾಗಿ ಕಾಲೇಜು ಮಟ್ಟದ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಪ್ರಾಂಶುಪಾಲ ಡಾ.ಆರ್.ಶ್ರೀನಿವಾಸ್ ರಾವ್ ಕುಂಟೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಡಾ.ಮೊಲಿ ಚೌಧರಿ ಸ್ವಾಗತಿಸಿದರು. ಕಾಲಿಡಾ ರೋಯ್ಸ್ ಕಾರ್ಯಕ್ರಮ ನಿರೂಪಿಸಿದರು. ಎಂಆರ್‌ಪಿಎಲ್ ಮ್ಯಾನೇಜರ್ ಎಚ್.ವಿ. ಮಂಜುನಾಥ ವಂದಿಸಿದರು.

### ಪ್ರಮಾಣಪತ್ರ ವಿತರಣೆ

ಚರ್ಚಾಸ್ಪರ್ಧೆಯಲ್ಲಿ ಮಂಗಳೂರು ಮತ್ತು ಉಡುಪಿಯಿಂದ ಇಂಜಿನಿಯರಿಂಗ್, ಔಷಧ, ದಂತ, ಔಷಧ ಮತ್ತು ನಿರ್ವಹಣಾ ವಿಭಾಗಗಳಲ್ಲಿನ 40 ವೃತ್ತಿಪರ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸುರತ್ಕಲ್‌ನ ಎನ್‌ಐಟಿಕೆ (ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕರ್ನಾಟಕ) ಕಾಲೇಜಿನ ವಿದ್ಯಾರ್ಥಿಗಳಾದ ಶುಭಾಂಗ್ ಮತ್ತು ಫಾತಿಮಾ (ಪ್ರಥಮ), ಯೆನೆಪೊಯ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಾದ ತಬಿಂದನಾಸಿಮ್ ಮತ್ತು ಅಕ್ಕಿನೇನಿ (ದ್ವಿತೀಯ), ಸಂತ ಜೋಸೆಫ್ ಇಂಜಿನಿಯರಿಂಗ್ ಕಾಲೇಜಿನ ಆಸ್ಲಿನ್ ಪೊಲೊ ಮತ್ತು ಆಕಾಶ್ ಲೋಬೊ (ತೃತೀಯ) ಅವರಿಗೆ ಪ್ರಶಸ್ತಿಯ ಪ್ರಮಾಣಪತ್ರ ವಿತರಿಸಲಾಯಿತು. ಅತ್ಯುತ್ತಮ ಚರ್ಚಾಪಟು ಪ್ರಶಸ್ತಿಗೆ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ವಿದ್ಯಾರ್ಥಿನಿ ದಿವ್ಯಾ ಭಾಜನರಾದರು.

ಶನಿವಾರ, 3 ನವೆಂಬರ್ 2018 | ಪುಟಗಳು: 24+12+4(Mng6, Ksd6) | ಬೆಲೆ: ₹ 5.00
VK
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |
www.vijaykarnataka.com
ಸಂಪುಟ: 18 | ಸಂಚಿಕೆ: 98

# ವಿಜಯ ಕರ್ನಾಟಕ

CENTRAL LIBRARY



ಖಾಸಗಿ ಹಕ್ಕನ್ನು ಮಾನವ ಹಕ್ಕಾಗಿ ಪರಿಗಣಿಸಿ: ಟೆಕ್ ಕಂಪನಿಗಳಿಗೆ ಸತ್ಯಾ ನಾದೆಳ್ಲಾ ಸಲಹೆ



ತಮಿಳುನಾಡಿನಲ್ಲಿ ಪಟಾಕಿ ಸಿಡಿಸಲು ಟೈಮಿಂಗ್: ಬೆಳಗ್ಗೆ6ರಿಂದ 7, ಸಂಜೆ 7ರಿಂದ 8 ಗಂಟೆವರೆಗೆ ಮಾತ್ರ

ದೀಪಿಕಾ-ರಣವೀರ್ ಮದುವೆ ಪ್ರಯುಕ್ತ ಬೆಂಗಳೂರಿನ ಮನೆಯಲ್ಲಿ ನಾಂದಿ ಪೂಜೆ

# ನಂಬಿಕೆ, ವಿಶ್ವಾಸ ಜೀವನದಲ್ಲಿ ಅತೀ ಮುಖ್ಯ: ಎಂ.ವೆಂಕಟೇಶ್




**ಮಂಗಳೂರು:** ನಂಬಿಕೆ ಹಾಗೂ ವಿಶ್ವಾಸ ಜೀವನದಲ್ಲಿ ಅತಿ ಮುಖ್ಯವಾಗಿದ್ದು, ನಂಬಿಕೆಯನ್ನು ಮುರಿಯುವಂತಹ ಕಾರ್ಯವನ್ನು ಯಾವತ್ತೂ ಮಾಡಬಾರದು ಭ್ರಷ್ಟಾಚಾರದಲ್ಲಿ ತೊಡಗಿಸಿಕೊಂಡವರು ನಂಬಿಕೆಗೆ ಅನರ್ಹರಾಗುತ್ತಾರೆ ಎಂದು ಎಂ ಆರ್ ಪಿ ಎಲ್ ವ್ಯವಸ್ಥಾಪಕ ನಿರ್ದೇಶಕ ಎಂ ವೆಂಕಟೇಶ್ ಹೇಳಿದರು.

ನಗರದ ಅಡ್ಯಾರ್ ಸಹ್ಯಾದ್ರಿ ಎಂಜಿನಿಯರಿಂಗ್ ಹಾಗೂ ಮ್ಯಾನೇಜ್‌ಮೆಂಟ್ ಕಾಲೇಜ್‌ನಲ್ಲಿ ಎಂಆರ್‌ಪಿಎಲ್ ಸಹಯೋಗದೊಂದಿಗೆ ಜಾಗೃತಿ ಅರಿವು ಸಪ್ತಾಹ ಅಂಗವಾಗಿ ಶುಕ್ರವಾರ ನಡೆದ ಅಂತರ್ ಕಾಲೇಜು ಚರ್ಚಾ ಸ್ಪರ್ಧೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಮುಖ್ಯ ವಿಜಿಲೆನ್ಸ್ ಅಧಿಕಾರಿ ರಾಜೀವ್ ಕುಶ್ವಾ ಮಾತನಾಡಿ, ಭ್ರಷ್ಟಾಚಾರವನ್ನು ಹೋಗಲಾಡಿಸಲು ಉತ್ತಮ ಉಪಾಯ ವಿದ್ಯಾರ್ಥಿಗಳಲ್ಲಿ ಇರಬಹುದು. ಅದನ್ನು ಅಳವಡಿಸುವಂತಾಗಬೇಕು ಎಂದರು.

ಸಹ್ಯಾದ್ರಿ ಕಾಲೇಜ್‌ನ ಪ್ರಿನ್ಸಿಪಾಲ್ ಡಾ.ಆರ್. ಶ್ರೀನಿವಾಸ ರಾವ್ ಕುಂಟೆ ಅಧ್ಯಕ್ಷತೆ ವಹಿಸಿದ್ದರು. ಡಾ. ಮೋಲಿ ಚೌಧರಿ ಸ್ವಾಗತಿಸಿದರು. ಕ್ಯಾಲಿಡಾ ರಾಯ್ಸ್ ಡಿಸೋಜ ನಿರೂಪಿಸಿ ದರು. ಎಂಆರ್‌ಪಿಎಲ್ ವಿಜಿಲೆನ್ಸ್ ವ್ಯವಸ್ಥಾಪಕ ಎಚ್.ವಿ. ಮಂಜುನಾಥ್ ವಂದಿಸಿದರು. ಈ ಸಂದರ್ಭ ನಡೆದ ಚರ್ಚಾ ಸ್ಪರ್ಧೆಯಲ್ಲಿ ಎನ್‌ಐಟಿಕೆಯ ಫಾತಿಮಾ, ಶುಭಾಂಗ್ ಪ್ರಥಮ ಸ್ಥಾನ, ಯೆನಪೋಯ ಮೆಡಿಕಲ್ ಕಾಲೇಜ್‌ನ ತಬಿಂದಾ ನಸೀಮ್, ಅಕ್ಕಿನೇನಿ ದ್ವಿತೀಯ ಸ್ಥಾನ ಹಾಗೂ ವಾಮಂಜೂರು ಸಂತ ಜೋಸೆಫರ ಎಂಜಿನಿಯರಿಂಗ್ ಕಾಲೇಜ್‌ನ ಆಸ್ಲಿನ್, ಆಕಾಶ್ ಲೋಬೊ ತೃತೀಯ ಸ್ಥಾನವನ್ನು ಪಡದರು ಸಹ್ಯಾದ್ರಿ ವಿದ್ಯಾ ಉತ್ತಮ ಮಾತುಗಾರ್ತಿ ಪ್ರಶಸ್ತಿಯನ್ನು ಪಡೆದರು.

**ಸಮಾರೋಪ:** ಕಾರ್ಯಕ್ರಮಕ್ಕೂ ಮೊದಲು ಭ್ರಷ್ಟಾಚಾರ ನಿರ್ಮೂಲನೆಗೊಳಿಸಿ ನವ ಭಾರತ ನಿರ್ಮಿಸೋಣ ಎಂಬ ಅಭಿಯಾನದಡಿ ಆನ್‌ಲೈನ್ ಸತ್ಯ ನಿಷ್ಠೆ ಪ್ರತಿಜ್ಞೆಯ ಕಿಯೋಸ್ಕ್‌ನ್ನು ಎಂಆರ್‌ಪಿಎಲ್ ಎಂಡಿ ಎಂ.ವೆಂಕಟೇಶ್ ಉದ್ಘಾಟಿಸಿದರು. ಎಂಆರ್‌ಪಿಎಲ್ ವಿಜಿಲೆನ್ಸ್ ವ್ಯವಸ್ಥಾಪಕ ಎಚ್.ವಿ. ಮಂಜುನಾಥ್ ಉಪಸ್ಥಿತರಿದ್ದರು.

ಮುಂಜಾನೆ ಮಾತು
ಆಸೆ ಮತ್ತು ಅವಶ್ಯಕತೆಗಳ ಮಧ್ಯೆ ಇರುವ ಅಂತರವನ್ನು ಗ್ರಹಿಸಿ ವ್ಯವಹರಿಸಲು ಸಾಧ್ಯವಾದರೆ ಅನವಶ್ಯಕ ತೊಂದರೆಗಳು ನಮ್ಮತ್ತ ಸುಳಿಯಲಾರವು.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ. 1 ಕನ್ನಡ ದಿನಪತ್ರಿಕೆ
CENTRAL LIBRARY
ಭಾರತೀ... ದೀಪಾವ...

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 7 ● ಸಂಚಿಕೆ 215
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 3 ನವೆಂಬರ್ 2018 | ಶನಿವಾರ 3 NOVE

# ಭ್ರಷ್ಟಾಚಾರ ಮುಕ್ತ ಭಾರತ ಯತ್ನ

## ಎಂಆರ್‌ಪಿಎಲ್ ಎಂಡಿ ವೆಂಕಟೇಶ್ ಆಶಯ




ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ಎಂಆರ್‌ಪಿಎಲ್ ವತಿಯಿಂದ ಆಯೋಜಿಸಲಾದ ಚರ್ಚಾ ಸ್ಪರ್ಧೆಯ ವಿಜೇತರು.

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಯುವ ಸಮುದಾಯ ಮನಸ್ಸು ಮಾಡಿದರೆ ಭಾರತವನ್ನು ಮುಂದೊಂದು ದಿನ ಭ್ರಷ್ಟಾಚಾರ ಮುಕ್ತ ರಾಷ್ಟ್ರವಾಗಿಸಬಹುದು ಎಂದು ಎಂಆರ್‌ಪಿಎಲ್ ಆಡಳಿತ ನಿರ್ದೇಶಕ ಎಂ.ವೆಂಕಟೇಶ್ ಅಭಿಪ್ರಾಯಪಟ್ಟರು.

ಅಡ್ಯಾರ್‌ನ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಎಂಆರ್‌ಪಿಎಲ್ ಸಂಸ್ಥೆಯ ವತಿಯಿಂದ ಶುಕ್ರವಾರ ಆಯೋಜಿಸಲಾದ ಭ್ರಷ್ಟಾಚಾರ ನಿರ್ಮೂಲನೆ ಮಾಡಿ ಹೊಸ ಭಾರತ ಕಟ್ಟೋಣ ವಿಷಯದ 'ಎಂಆರ್‌ಪಿಎಲ್-ಸಹ್ಯಾದ್ರಿ ಅಂತರ್ ಕಾಲೇಜು ಚರ್ಚಾ ಸ್ಪರ್ಧೆ-2018'ರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಎಂಆರ್‌ಪಿಎಲ್ ಮುಖ್ಯ ವಿಚಕ್ಷಣಾ ಅಧಿಕಾರಿ ರಾಜೀವ್ ಕುಶ್ವಾ, ಪ್ರತಿಯೊಬ್ಬರೂ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವ ಅಗತ್ಯವಿದೆ ಎಂದರು.

ಪ್ರಾಂಶುಪಾಲ ಡಾ.ಆರ್.ಶ್ರೀನಿವಾಸ್ ರಾವ್ ಕುಂಟೆ ಅಧ್ಯಕ್ಷತೆ ವಹಿಸಿದ್ದರು. ಡಾ.ಮೊಲ್ಲಿ ಚೌಧರಿ ಸ್ವಾಗತಿಸಿದರು. ಎಂಆರ್‌ಪಿಎಲ್ ವಿಜಿಲೆನ್ಸ್ ಮ್ಯಾನೇಜರ್ ಎಚ್.ವಿ.ಮಂಜುನಾಥ್ ವಂದಿಸಿದರು. ಕ್ಯಾಲಿಡಾ ರೋಸಿ ಡಿಸೋಜ ಕಾರ್ಯಕ್ರಮ ನಿರೂಪಿಸಿದರು.

### ಸುರತ್ಕಲ್ ಎನ್‌ಐಟಿಕೆ ಪ್ರಥಮ

ಚರ್ಚಾ ಸ್ಪರ್ಧೆಯಲ್ಲಿ ಒಟ್ಟು 16 ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎನ್‌ಐಟಿಕೆ ಸುರತ್ಕಲ್‌ನ ವಿದ್ಯಾರ್ಥಿಗಳು ಪ್ರಥಮ, ಯೇನೆಪೋಯ ಮೆಡಿಕಲ್ ಕಾಲೇಜು ದ್ವಿತೀಯ ಹಾಗೂ ಸಂತ ಜೋಸೆಫ್ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದರು. ವಿಚಕ್ಷಣಾ ಜಾಗೃತಿ ಸಪ್ತಾಹದ ಅಂಗವಾಗಿ ಕಾಲೇಜಿನಲ್ಲಿ ಆರಂಭಿಸಲಾಗಿರುವ 'ಸತ್ಯ ನಿಷ್ಠೆ ಮತ್ತು ಪ್ರಾಮಾಣಿಕತೆ- ಆನ್‌ಲೈನ್ ಪ್ರತಿಜ್ಞಾ ಸ್ವೀಕಾರ ಕೇಂದ್ರವನ್ನು ಎಂಆರ್‌ಪಿಎಲ್ ಎಂಡಿ ಎಂ.ವೆಂಕಟೇಶ್ ರಾವ್ ಉದ್ಘಾಟಿಸಿದರು.